ಕೊಡಗು ವಿಶ್ವವಿದ್ಯಾಲಯ
KODAGU UNIVERSITY

Office of the Registrar (Evaluation)
Jnana Kaveri Campus
Chikka Aluvara, Thorenoor Post,
Kushalnagar Taluk, Kodagu District
E-Mail– reg-evkuk@karnataka.gov.in

Dr. Seenappa
*Registrar (Evaluation)*

ಸಂಖ್ಯೆ: ಕೊವಿವಿ/ಪ.ವಿ/ಸ್ನಾಪ.ಪ/2023–24/117

ದಿನಾಂಕ: 11.01.2024

## ಪರೀಕ್ಷಾ ಪ್ರಕಟಣೆ

**ವಿಷಯ: 2023–2024ನೇ ಸಾಲಿನ ಜನವರಿ/ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ**

*****

ಕೊಡಗು ವಿಶ್ವವಿದ್ಯಾಲಯದ 2023–2024ನೇ ಸಾಲಿನ ಜನವರಿ/ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020 ಆಧಾರಿತ ಪ್ರಥಮ ಸೆಮಿಸ್ಟರ್ ಆವರ್ತಿತ ಸ್ನಾತಕ ಪದವಿ ಕಾರ್ಯಕ್ರಮಗಳ ಲಿಖಿತ ಪರೀಕ್ಷೆಗಳು ದಿನಾಂಕ 25.01.2024ರಿಂದ ಪ್ರಾರಂಭವಾಗಲಿರುವುದು ಎಂಬುದನ್ನು ಪದವಿ ಕಾರ್ಯಕ್ರಮಗಳ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ಸದರಿ ಪರೀಕ್ಷೆಗಳಿಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ.

**ಸೂಚನೆಗಳು:**

1. ರಾಷ್ಟ್ರೀಯ ಶಿಕ್ಷಣ ನೀತಿ 2020 ಆಧಾರಿತ ಪ್ರಥಮ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ UUCMS Portal ನಲ್ಲಿ ನೋಂದಣಿ ಮಾಡತಕ್ಕದ್ದು ಹಾಗೂ ಸಂಬಂಧಿಸಿದ ಪರೀಕ್ಷಾ ಶುಲ್ಕವನ್ನು Online ನಲ್ಲಿಯೇ UUCMS Portal ಮುಖಾಂತರ ಪಾವತಿಸತಕ್ಕದ್ದು.
2. ಆಂತರಿಕ ಅಂಕಗಳ ಪಟ್ಟಿಯನ್ನು Online ನಲ್ಲಿ ಭರ್ತಿಮಾಡಿದ ನಂತರ ವಿದ್ಯಾರ್ಥಿಗಳ ಸಹಿ ಪಡೆದು ಕಡ್ಡಾಯವಾಗಿ ಕುಲಸಚಿವ(ಪರೀಕ್ಷಾಂಗ)ರ ಕಛೇರಿಗೆ ಕಳುಹಿಸತಕ್ಕದ್ದು.
3. ವಿದ್ಯಾರ್ಥಿಗಳು ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ಪಠ್ಯೇತರ ವಿಷಯ(ಇಡಿ/ಸಿಸಿ)ಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
4. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಸದರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ.
5. ವಿಶ್ವವಿದ್ಯಾಲಯದ ವಿನಿಯಮದ (ರೆಗ್ಯುಲೇಶನ್) ಪ್ರಕಾರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್‌ನ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ. ಕುಲಸಚಿವರಿಂದ ಪ್ರವೇಶಾತಿ ಅನುಮೋದಿಸಲ್ಪಡದ ವಿದ್ಯಾರ್ಥಿಗಳು ಮತು ನಿಯಾಮನುಸಾರ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ. ಪ್ರವೇಶಾವಕಾಶ ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ಪ್ರವೇಶವು ಅನಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವುದೇ ವಿದ್ಯಾರ್ಥಿಯೂ ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ, ಸದರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು, ಇಲ್ಲವಾದಲ್ಲಿ ಕಾಲೇಜಿನ ಪ್ರಾಂಶುಪಾಲರೇ ಜವಾಬ್ದಾರರಾಗುವರು.
6. ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ(ಕಾಲೇಜು ಮತ್ತು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ) ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಮುಖಾಂತರ ನಿಯಮಾನುಸಾರ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ ಇತರೆ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ನಿಗಾವಹಿಸತಕ್ಕದ್ದು.
7. ಅಭ್ಯರ್ಥಿಗಳು ತಮ್ಮ ಪರೀಕ್ಷಾ ಅರ್ಜಿಯನ್ನು ಹಾಗೂ ಶುಲ್ಕವನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬೇಕು.
8. ಪರೀಕ್ಷಾ ಶುಲ್ಕ ವಿವರ:

| ಕ್ರಮ ಸಂಖ್ಯೆ | ಪರೀಕ್ಷೆ | ರಾಷ್ಟ್ರೀಯ ಶಿಕ್ಷಣ ನೀತಿ 2020 ಆಧಾರಿತ ಪ್ರಥಮ ಸೆಮಿಸ್ಟರ್ ಆವರ್ತಿತ ಪರೀಕ್ಷೆ | ಪರೀಕ್ಷಾ ಶುಲ್ಕ |
|---|---|---|---|
| 1 | ಬಿಎ/ಬಿಕಾಂ/ಬಿ.ಬಿ.ಎ | ಪ್ರಥಮ ಸೆಮಿಸ್ಟರ್(ಪ್ರಾಯೋಗಿಕ ಪರೀಕ್ಷೆ ಹೊರತು ಪಡಿಸಿ)<br>ಪ್ರಾಯೋಗಿಕ ಪರೀಕ್ಷೆಯೊಂದಿಗೆ | ರೂ.300.00<br>ರೂ.400.00 |
| 2 | ಬಿ.ಎಸ್ಸಿ | ಪ್ರಥಮ ಸೆಮಿಸ್ಟರ್ (ಪೂರ್ಣ ಪರೀಕ್ಷೆ – ಪ್ರಾಯೋಗಿಕ ಮತ್ತು ಥಿಯರಿ) | ರೂ. 450.00 |
| 3 | ಬಿ.ಸಿ.ಎ | ಪ್ರಥಮ ಸೆಮಿಸ್ಟರ್ (ಪೂರ್ಣ ಪರೀಕ್ಷೆ – ಪ್ರಾಯೋಗಿಕ ಮತ್ತು ಥಿಯರಿ) | ರೂ. 450.00 |

9. ಮೇಲೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.230/- ಅಂಕಪಟ್ಟಿ ಶುಲ್ಕ ಮತ್ತು ರೂ. 120/- ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿಸತಕ್ಕದ್ದು.

10. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು (ದಂಡಶುಲ್ಕ ರಹಿತ ಮತ್ತು ವಿವಿಧ ದರಗಳಲ್ಲಿ ದಂಡಶುಲ್ಕ ಸಹಿತ) ಪಾವತಿ ಮಾಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ,

<u>ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:</u>

| | |
|---|---|
| ದಂಡಶುಲ್ಕ ರಹಿತ | – 18.01.2024 |
| ದಂಡಶುಲ್ಕ ದಿನವೊಂದಕ್ಕೆ ರೂ. 60/-ರಂತೆ | – 19.01.2024 |
| ದಂಡಶುಲ್ಕ ದಿನವೊಂದಕ್ಕೆ ರೂ. 110/- ರಂತೆ | – 21.01.2024 |
| ವಿಶೇಷ ದಂಡಶುಲ್ಕ ರೂ. 500/- ರಂತೆ | – 22.01.2024 |

11. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿನ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

12. ವಿದೇಶಿ ಅಭ್ಯರ್ಥಿಗಳು, ನಿಗದಿಪಡಿಸಿದ ಎಲ್ಲಾ ಶುಲ್ಕಗಳ ಮೂರು ಪಟ್ಟು ಶುಲ್ಕವನ್ನು ಪಾವತಿಸತಕ್ಕದ್ದು.

13. ಈ ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ತಪ್ಪದೇ ಈ ಕಛೇರಿಗೆ ದಿನಾಂಕ 30.01.2024ರ ಒಳಗಾಗಿ ಕಳುಹಿಸಿಕೊಡುವುದು.

    ಅ) ಪರೀಕ್ಷಾ ಹಣಕಾಸು ತಃಖ್ತೆ

    ಆ) ಶುಲ್ಕ ವಿನಾಯಿತಿ ತಃಖ್ತೆ (ಪರಿಶಿಷ್ಟ ಜಾತಿ/ಪಂಗಡ)

14. ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳ ನಂತರ ನಡೆಸತಕ್ಕದ್ದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದು.

15. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.

ಕುಲಸಚಿವರು(ಪರೀಕ್ಷಾಂಗ)
**ಕುಲಸಚಿವರು (ಮೌಲ್ಯಮಾಪನ)**
**ಕೊಡಗು ವಿಶ್ವವಿದ್ಯಾಲಯ**
**ಚಿಕ್ಕ ಅಳುವಾರ-571232**
**ಕುಶಾಲನಗರ ತಾ, ಕೊಡಗು, ಕರ್ನಾಟಕ**

ಲಗತ್ತು:

1) ಪರೀಕ್ಷಾ ಹಣಕಾಸು ತಃಖ್ತೆ
2) ಪರೀಕ್ಷಾ ಶುಲ್ಕ ವಿನಾಯಿತಿ ತಃಖ್ತೆ (ಪರಿಶಿಷ್ಟ ಜಾತಿ/ಪಂಗಡ)
3) UUCMS ಪರೀಕ್ಷಾ ಕಾರ್ಯ/ಪ್ರಕ್ರಿಯೆಗಳ ವಿವರ

ರಿಗೆ,

ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯಲ್ಲಿ ಬರುವ ಪದವಿ ಕಾರ್ಯಕ್ರಮಗಳನ್ನು ಬೋಧಿಸುತ್ತಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

<u>ಪ್ರತಿ:</u>

1. ಕುಲಸಚಿವರು/ಹಣಕಾಸು ಅಧಿಕಾರಿಗಳು, ಕೊಡಗು ವಿಶ್ವವಿದ್ಯಾಲಯ, ಕೊಡಗು.
2. ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ಕೊಡಗು ವಿಶ್ವವಿದ್ಯಾಲಯ, ಕೊಡಗು
4. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಮಂಗಳೂರು.
5. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಮಡಿಕೇರಿ, ಕೊಡಗು ಜಿಲ್ಲೆ.
6. ಸಂಯೋಜಕರು, ಸ್ನಾತಕ ಪದವಿ ಪರೀಕ್ಷೆ, ಕೊಡಗು ವಿಶ್ವವಿದ್ಯಾಲಯ, ಕೊಡಗು.